MANGALORE MARKET REPORTS

MMR MEDIA Since 1975

REGD. OFFICE : QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - WEDNESDAY 19-4-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮುಂದಿನ 5 ವರ್ಷಗಳಲ್ಲಿ 10 ಮಿಲಿಯನ್ ಟನ್ ಜೋಳ ಉತ್ಪಾದನೆ ಹೆಚ್ಚಳ ಗುರಿ

ಹೆಚ್ಚುತ್ತಿರುವ ಪೌಲ್ಟ್ರಿ ವಲಯದ ಬೇಡಿಕೆ ಹಾಗೂ ಹೆಚ್ಚಿನ ಇಥೆನಾಲ್ ಉತ್ಪಾದಿಸಲು ಮುಂದಿನ 5 ವರ್ಷಗಳಲ್ಲಿ ಜೋಳ ಉತ್ಪಾದನೆ 10 ಮಿಲಿಯನ್ ಟನ್ ಹೆಚ್ಚಳಗೊಳಿಸಬೇಕಾಗಿದೆಯೆನ್ನಲಾಗಿದೆ. ಬೇಡಿಕೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ.

## ಸಕ್ಕರೆ ಉತ್ಪಾದನೆ 10 ಶೇಕಡಾ ಇಳಿಕೆ

ವಿವಿಧ ಏಜೆನ್ಸಿಗಳ ಅಂದಾಜಿನಂತೆ ಈ ವರ್ಷ ಭಾರತದ ಸಕ್ಕರೆ ಉತ್ಪಾದನೆ ಹಿಂದಿನ ವರ್ಷಕ್ಕಿಂತ 10 ಶೇಕಡಾ ಇಳಿಕೆಯಾಗಿ 325 ಲಕ್ಷ ಟನ್ ಗಳಾಗಲಿದೆಯೆನ್ನಲಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ 359.25 ಲಕ್ಷ ಟನ್ ಉತ್ಪಾದನೆಯಾಗಿತ್ತು. ಪ್ರಥಮ 6 ತಿಂಗಳ ಉತ್ಪಾದನೆ ಹಿಂದಿನ ವರ್ಷಕ್ಕಿಂತ 3 ಶೇಕಡಾ ಇಳಿಕೆಯಾಗಿ 299.6 ಲಕ್ಷ ಟನ್‌ಗಳಾಗಿತ್ತು. ಹಿಂದಿನ ವರ್ಷದಲ್ಲಿ ಇದು 309.9 ಲಕ್ಷ ಟನ್‌ಗಳಾಗಿತ್ತು. ISMA ಅಂದಾಜಿನಂತೆ ಹಿಂದಿನ ವರ್ಷದ 358 ಲಕ್ಷ ಟನ್ ಬದಲಾಗಿ ಈ ವರ್ಷ 340 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಬಹುದೆನ್ನಲಾಗಿದೆ. ಮಹಾರಾಷ್ಟ್ರದ ಉತ್ಪಾದನೆ ಹಿಂದಿನ ವರ್ಷದ 118.8 ಲಕ್ಷ ಟನ್‌ಗಳಿಂದ 104.2 ಲಕ್ಷ ಟನ್‌ಗಳಿಗೆ ಇಳಿಕೆಯಾಗಬಹುದೆನ್ನಲಾಗಿದೆ. ಕರ್ನಾಟಕದ ಉತ್ಪಾದನೆ 57.2 ಲಕ್ಷ ಟನ್‌ಗಳಿಂದ 55.2 ಲಕ್ಷ ಟನ್‌ಗಳಿಗೆ ಇಳಿಕೆಯಾಗಬಹುದೆನ್ನಲಾಗಿದೆ. ತೀವ್ರ ತರದ ಬೇಸಿಗೆಯಿಂದ ತಂಪು ಪಾನೀಯ ಹಾಗೂ ಐಸ್‌ಕ್ರೀಂ ತಯಾರಕರಿಂದ ಬೇಡಿಕೆ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ.

## ಸರಕಾರಿ ಏಜೆನ್ಸಿಗಳ ಗೋಧಿ ಖರೀದಿ 18 ಶೇಕಡಾ ಕಡಿಮೆ

2023–24 ನೇ ಸಾಲಿನಲ್ಲಿ ಇದುವರೆಗೆ ಸರಕಾರಿ ಏಜೆನ್ಸಿಗಳು 41 ಲಕ್ಷ ಟನ್ ಗೋಧಿ ಖರೀದಿಸಿದೆಯೆನ್ನಲಾಗಿದ್ದು, ಹಿಂದಿನ ವರ್ಷದ ಇದೇ ಅವಧಿಯ ಖರೀದಿಗಿಂತ 18 ಶೇಕಡಾ ಕಡಿಮೆಯೆನ್ನಲಾಗಿದೆ. ಕಟಾವು ವಿಳಂಬದಿಂದ ಆವಕ ಇಳಿಕೆಯಾಗಿದ್ದರಿಂದ ಖರೀದಿ ಪ್ರಮಾಣ ಇಳಿಕೆಯಾಗಿದೆಯೆನ್ನಲಾಗಿದ್ದು, ಹಿಂದಿನ ವರ್ಷ ಇದೇ ಅವಧಿಯಲ್ಲಿ 50 ಲಕ್ಷ ಟನ್ ಗೋಧಿ ಖರೀದಿಯಾಗಿತ್ತೆನ್ನಲಾಗಿದೆ. ಆವಕ ಹೆಚ್ಚಳವಾದಂತೆ ಮುಂದಿನ ದಿನಗಳಲ್ಲಿ ಖರೀದಿ ಹೆಚ್ಚಳವಾಗಲಿದೆಯೆನ್ನಲಾಗಿದೆ. ಈ ವರ್ಷ ಸರಕಾರ 34.2 ಮಿಲಿಯನ್ ಟನ್ ಗೋಧಿ ಖರೀದಿಯ ಗುರಿ ಹೊಂದಿದೆಯೆನ್ನಲಾಗಿದೆ. ಹಿಂದಿನ ವರ್ಷ 19 ಮಿಲಿಯನ್ ಟನ್ ಖರೀದಿಯಾಗಿತ್ತೆನ್ನಲಾಗಿದೆ. ಈ ವರ್ಷ 112.18 ಮಿಲಿಯನ್ ಟನ್ ಗೋಧಿ ಉತ್ಪಾದನೆಯಾಗಬಹುದೆನ್ನಲಾಗಿದೆ.